**All India Radio: Bangalore**
**National Bulletin In Kannada**
**11.03.2025 07.35 a.m.**
**ಆಕಾಶವಾಣಿ, ಬೆಂಗಳೂರು**
**ರಾಷ್ಟ್ರೀಯ ವಾರ್ತೆಗಳು**
**11.03.2025 07.35 a.m.**
*********************

ಮುಖ್ಯಾಂಶಗಳು

೧. ರಾಷ್ಟ್ರಪತಿ ದ್ರೌಪದಿ ಮುರ್ಮು ಇಂದಿನಿಂದ ಎರಡು ದಿನಗಳ ಪಂಜಾಬ್ ಭೇಟಿ

೨. ಇಂದು ಮಾರಿಷಸ್ ರಾಜಧಾನಿ ಪೋರ್ಟ್- ಲೂಯಿಸ್ ತಲುಪಲಿರುವ ಪ್ರಧಾನಿ ನರೇಂದ್ರ ಮೋದಿ

೩. ಹೋಳಿ ಹಬ್ಬ ಹಿನ್ನೆಲೆ; ಉತ್ತರ ರೈಲ್ವೆಯಿಂದ ೪೦೦ ವಿಶೇಷ ರೈಲುಗಳ ಕಾರ್ಯಾಚರಣೆ

೪. ನವದೆಹಲಿಯಲ್ಲಿ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಗ್ರ್ಯಾಂಡ್ ಪ್ರಿಕ್ಸ್-೨೦೨೫ ಇಂದಿನಿಂದ ಆರಂಭ

೫. ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್; ಇಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು- ಮುಂಬೈ ಇಂಡಿಯನ್ಸ್ ಮುಖಾಮುಖಿ

*****************

ರಾಷ್ಟ್ರಪತಿ ದ್ರೌಪದಿ ಮುರ್ಮು ಇಂದಿನಿಂದ ಎರಡು ದಿನಗಳ ಕಾಲ ಪಂಜಾಬ್ ಹಾಗೂ ಕೇಂದ್ರಾಡಳಿತ ಪ್ರದೇಶ ಚಂಡಿಘಡಕ್ಕೆ ಭೇಟಿ ನೀಡಲಿದ್ದಾರೆ.

ಪಂಜಾಬ್ ಕೇಂದ್ರೀಯ ವಿಶ್ವವಿದ್ಯಾಲಯ, ಭಟಿಂಡಾದ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ-ಏಮ್ಸ್‌ನ ಘಟಿಕೋತ್ಸವ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ.

ಎರಡೂ ಕಾರ್ಯಕ್ರಮದಲ್ಲಿ ಪಂಜಾಬ್ ರಾಜ್ಯಪಾಲ ಗುಲಾಬ್ ಚಂದ್ ಕಟಾರಿಯಾ ಸೇರಿದಂತೆ ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ. ರಾಷ್ಟ್ರಪತಿಗಳು ಪಾಲ್ಗೊಳ್ಳುವ ಕಾರ್ಯಕ್ರಮಗಳ ಸ್ಥಳಗಳಲ್ಲಿ ಭಾರೀ ಭದ್ರತಾ ವ್ಯವಸ್ಥೆಗಳನ್ನು ಕೈಗೊಳ್ಳಲಾಗಿದೆ ಎಂದು ನಮ್ಮ ಬಾತ್ಮೀದಾರರು ವರದಿ ಮಾಡಿದ್ದಾರೆ.

*****************

ಪ್ರಧಾನಿ ನರೇಂದ್ರಮೋದಿ ಅವರು ಎರಡುದಿನಗಳ ಅಧಿಕೃತ ಮಾರಿಷಸ್ ಭೇಟಿಗಾಗಿ ಇಂದು ಬೆಳಿಗ್ಗೆ ರಾಜಧಾನಿ ಪೋರ್ಟ್‌ಲೂಯಿಸ್ ತಲುಪಲಿದ್ದಾರೆ.

ಮಾರಿಷಸ್, ಭಾರತದ ನಿಕಟ ಕಡಲ ನೆರೆಹೊರೆಯ ದೇಶವಾಗಿದ್ದು, ಹಿಂದೂ ಮಹಾಸಾಗರದ ಪ್ರಮುಖ ಪಾಲುದಾರ ಹಾಗೂ ಆಫ್ರಿಕಾ ಖಂಡಕ್ಕೆ ಪ್ರವೇಶ ದ್ವಾರವಾಗಿದೆ ಎಂದು ಪ್ರಧಾನಿ ತಮ್ಮ ನಿರ್ಗಮನ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಉಭಯ ರಾಷ್ಟ್ರಗಳು ಇತಿಹಾಸ, ಭೌಗೋಳಿಕ ಹಾಗೂ ಸಾಂಸ್ಕೃತಿಕ ಸಂಪರ್ಕ ಹೊಂದಿವೆ. ಪರಸ್ಪರ ಆಳವಾದ ನಂಬಿಕೆ, ಪ್ರಜಾಪ್ರಭುತ್ವದ ಮೌಲ್ಯಗಳಲ್ಲಿ ಹಂಚಿಕೆಯ ನಂಬಿಕೆ ಹೊಂದಿದ್ದು, ವೈವಿಧ್ಯತೆಯ ಆಚರಣೆ ಎರಡೂ ದೇಶಗಳ ಶಕ್ತಿಗಳಾಗಿವೆ ಎಂದು ಪ್ರದಾನಿ ಮೋದಿ ಅವರು ಹೇಳಿದ್ದಾರೆ.

ಮಾರಿಷಸ್ ನಾಯಕತ್ವದೊಂದಿಗೆ ಮಾತುಕತೆ ನಡೆಸುವ ಅವಕಾಶ ಎದುರು ನೋಡುತ್ತಿರುವುದಾಗಿ, ಜನರ ಪ್ರಗತಿ, ಸಮೃದ್ಧಿಗಾಗಿ ಹಾಗೂ ಹಿಂದೂ ಮಹಾಸಾಗರ ಪ್ರದೇಶದ ಭದ್ರತೆ, ಅಭಿವೃದ್ಧಿಗಾಗಿ, ಪಾಲುದಾರಿಕೆ ಉನ್ನತೀಕರಿಸಲು ಮತ್ತು ಶಾಶ್ವತ ಸ್ನೇಹ ಬಲಪಡಿಸುವುದಾಗಿ ಪ್ರಧಾನಿ ಹೇಳಿದ್ದಾರೆ.

ತಮ್ಮ ಮಾರಿಷಸ್ ಭೇಟಿಯಿಂದ ಉಭಯ ದೇಶಗಳ ಸಂಬಂಧದಲ್ಲಿ ಹೊಸ ಹಾಗೂ ಪ್ರಕಾಶಮಾನವಾದ ಅಧ್ಯಾಯ ಆರಂಭವಾಗಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಪ್ರಧಾನಿ ಮೋದಿ ಇಂದು ಸರ್ ಸೀವೂಸಗೂರ್ ರಾಮಗೂಲಮ್ ಸಸ್ಯೋದ್ಯಾನಕ್ಕೆ ಭೇಟಿ ನೀಡಿ ಸರ್ ಸೀವೂಸಗೂರ್ ರಾಮಗೂಲಮ್, ಸರ್. ಅನೆರೂದ್ ಜುಗ್ನಾಥ್ ಅವರಿಗೆ ಗೌರವ ಸಲ್ಲಿಸಲಿದ್ದಾರೆ. ಅಲ್ಲದೆ ಸಂಕೀರ್ಣದಲ್ಲಿ ಸಸಿಯೊಂದನ್ನು ನೆಡಲಿದ್ದಾರೆ. ನಂತರ, ಪ್ರಧಾನಿಯವರು ಅಧ್ಯಕ್ಷ ಧರಂ ಗೋಕುಲ್ ಅವರನ್ನು ಭೇಟಿ ಮಾಡಲಿದ್ದಾರೆ.

ಸಂಜೆ ನಡೆಯುವ ಸಮುದಾಯ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಭಾಗವಹಿಸಲಿದ್ದಾರೆ. ಮಾರಿಷಸ್‌ನಲ್ಲಿರುವ ಭಾರತೀಯ ಮೂಲದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲಿದ್ದಾರೆ. ನಂತರ, ಮಾರಿಷಸ್‌ನ ಪ್ರಧಾನಿ ನವೀನ್ ಚಂದ್ರ ರಾಮಗೂಲಂ ಅವರನ್ನು ಭೇಟಿ ಮಾಡಲಿದ್ದಾರೆ.

ಪ್ರಧಾನಿ ಮೋದಿ ಅವರು ನಾಳೆ ಮಾರಿಷಸ್‌ನ ರಾಷ್ಟ್ರೀಯ ದಿನಾಚರಣೆಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಭಾರತೀಯ ನೌಕಾಪಡೆಯ ಹಡಗಿನೊಂದಿಗೆ ರಕ್ಷಣಾ ಪಡೆಗಳ ತುಕಡಿ ಸಹ ದಿನಾಚರಣೆಯಲ್ಲಿ ಭಾಗವಹಿಸಲಿದೆ. ಭೇಟಿಯ ಸಮಯದಲ್ಲಿ ಸಾಗರ ಭದ್ರತೆ, ಸಾಮರ್ಥ್ಯ ವೃದ್ಧಿ ಮತ್ತು ವ್ಯಾಪಾರ ಕ್ಷೇತ್ರಗಳಲ್ಲಿ ಹಲವಾರು ಒಪ್ಪಂದಗಳಿಗೆ ಸಹಿ ಹಾಕುವ ಸಾಧ್ಯತೆಯಿದೆ. ಭಾರತ ಮತ್ತು ಮಾರಿಷಸ್ ನಡುವಿನ ಸಂಬಂಧ ತುಂಬಾ ಹಳೆಯದು ಮತ್ತು ಬಹುಮುಖಿಯಾಗಿದೆ. ಪ್ರಧಾನಿಯವರ ಈ ಭೇಟಿಯು ಈ ಸಂಬಂಧಗಳನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುವ ನಿರೀಕ್ಷೆಯಿದೆ. ಪ್ರಧಾನಿ ಮಾರಿಷಸ್ ಭೇಟಿ ಕುರಿತಂತೆ ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಮಾಹಿತಿ ನೀಡಿದ್ದಾರೆ.

ಧ್ವನಿ: ರಣಧೀರ್ ಜೈಸ್ವಾಲ್ ೨೯ ಸೆಕೆಂಡ್

*****************

ಕೇಂದ್ರದ ಜಲಜೀವನ್ ಮಿಷನ್‌ನಿಂದ ಶೇಕಡ ೮೦ಕ್ಕೂ ಹೆಚ್ಚು ಗ್ರಾಮೀಣ ಕುಟುಂಬಗಳು ಕೊಳಾಯಿ ನೀರಿನ ಸಂಪರ್ಕ ಸೌಲಭ್ಯ ಪಡೆಯುತ್ತಿವೆ ಎಂದು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ್ ಹೇಳಿದ್ದಾರೆ.

ರಾಜ್ಯಸಭೆಯಲ್ಲಿ ನಿನ್ನೆ ಪೂರಕ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಸಚಿವರು ೨೦೧೯ ರಲ್ಲಿ ಕೇವಲ ಶೇಕಡ ೧೬ ರಷ್ಟು ಗ್ರಾಮೀಣ ಕುಟುಂಬಗಳು ಮಾತ್ರ ಕೊಳಾಯಿ ನೀರಿನ ಸಂಪರ್ಕ ಹೊಂದಿದ್ದವು.

ವಿಶ್ವ ಆರೋಗ್ಯ ಸಂಸ್ಥೆ ಅಂದಾಜಿನ ಪ್ರಕಾರ, ನೀರಿನಿಂದ ಹರಡುವ ರೋಗಗಳಿಂದ ಸಂಭವಿಸುವ ನಾಲ್ಕು ಲಕ್ಷ ಸಾವುಗಳನ್ನು ತಡೆಗಟ್ಟುವಲ್ಲಿ ಈ ಯೋಜನೆ ಕೊಡುಗೆ ನೀಡಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

*****************

ಹೋಳಿ ಹಬ್ಬದ ಹಿನ್ನೆಲೆಯಲ್ಲಿ ಪ್ರಾಯಾಣಿಕರ ಸುಗಮ ಪ್ರಯಾಣಕ್ಕಾಗಿ ಉತ್ತರ ರೈಲ್ವೆ ೪೦೦ಕ್ಕೂ ಹೆಚ್ಚು ವಿಶೇಷ ರೈಲುಗಳ ಕಾರ್ಯಾಚರಣೆ ನಡೆಸಲಿದೆ.

ನವದೆಹಲಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಉತ್ತರ ರೈಲ್ವೆಯ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಹಿಮಾಂಶು ಶೇಖರ್ ಉಪಾಧ್ಯಾಯ ಪ್ರಯಾಣಿಕರಿಗೆ ಅನುಕೂಲವಾಗುವಂತೆ ಸಮಗ್ರ ವ್ಯವಸ್ಥೆಗಳನ್ನು ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ನವದೆಹಲಿ, ಆನಂದ್ ವಿಹಾರ್ ಹಾಗೂ ಹಜರತ್ ನಿಜಾಮುದ್ದೀನ್ ರೈಲು ನಿಲ್ದಾಣಗಳಲ್ಲಿ ಪ್ರಯಾಣಿಕರಿಗಾಗಿ ಭದ್ರತಾ ವ್ಯವಸ್ಥೆಗಳು, ನಿಯಂತ್ರಣ ಕೊಠಡಿಗಳು ಹಾಗೂ ನಿರೀಕ್ಷಣಾ ಸ್ಥಳಗಳನ್ನು ಸ್ಥಾಪಿಸಲಾಗಿದೆ ಎಂದು ಅವರು ವಿವರಿಸಿದ್ದಾರೆ.

ಅಗತ್ಯವಿದ್ದರೆ, ಬೇಡಿಕೆಯಂತೆ ವಿಶೇಷ ರೈಲುಗಳನ್ನು ಸಹ ಓಡಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಪ್ರಯಾಣಕ್ಕಾಗಿ ಟಿಕೆಟ್‌ಗಳನ್ನು ಹೊಂದಿರುವ ಪ್ರಯಾಣಿಕರಿಗೆ ಮಾತ್ರ ಪ್ಲಾಟ್‌ಫಾರಂ ಪ್ರವೇಶವನ್ನು ಅನುಮತಿಸಲಾಗುತ್ತದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

*****************

ಭಾರತವು ೨೦೨೪-೨೫ರಲ್ಲಿ ಅಕ್ಕಿ, ಗೋಧಿ, ಜೋಳ, ನೆಲಗಡಲೆ ಮತ್ತು ಸೋಯಾಬಿನ್‌ಗಳ ದಾಖಲೆ ಉತ್ಪಾದನೆ ಮಾಡಿದೆ.

ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ ನಿನ್ನೆ ಬಿಡುಗಡೆ ಮಾಡಿದ ವರದಿ ಪ್ರಕಾರ, ಈ ಅವಧಿಯಲ್ಲಿ ದೇಶದ ಮುಂಗಾರು ಆಹಾರ ಧಾನ್ಯ ಉತ್ಪಾದನೆಯು ೧೬೬೩.೯೧ ಲಕ್ಷ ಮೆಟ್ರಿಕ್ ಟನ್ ಎಂದು ಅಂದಾಜಿಸಲಾಗಿದೆ.

ಹಿಂಗಾರು ಆಹಾರ ಉತ್ಪಾದನೆಯು ೧ ಸಾವಿರದ ೬೪೫.೨೭ ಲಕ್ಷ ಮೆಟ್ರಿಕ್ ಟನ್ ಎಂದು ಅಂದಾಜಿಸಲಾಗಿದೆ.

ಮುಂಗಾರು ಅಕ್ಕಿ ಉತ್ಪಾದನೆಯು ೨೦೨೩-೨೪ರಲ್ಲಿ ೧ ಸಾವಿರದ ೧೩೨ ಲಕ್ಷ ಮೆಟ್ರಿಕ್ ಟನ್‌ಗೆ ಹೋಲಿಸಿದರೆ, ೨೦೨೪-೨೫ರಲ್ಲಿ ೧ ಸಾವಿರದ ೨೦೬ ಲಕ್ಷ ಮೆಟ್ರಿಕ್ ಟನ್ ಆಗಿದೆ.

ಹಿಂಗಾರು ಅಕ್ಕಿ ಉತ್ಪಾದನೆಯು ೧೫೭ ಲಕ್ಷ ಮೆಟ್ರಿಕ್ ಟನ್, ಗೋಧಿ ಉತ್ಪಾದನೆಯು ೧ ಸಾವಿರದ ೧೫೪ ಲಕ್ಷ ಮೆಟ್ರಿಕ್ ಟನ್ ಹಾಗೂ ಮುಂಗಾರು ಸಿರಿಧಾನ್ಯ ಉತ್ಪಾದನೆಯು ೧೩೭ ಲಕ್ಷ ಮೆಟ್ರಿಕ್ ಟನ್ ಮತ್ತು ಹಿಂಗಾರು ಸಿರಿಧಾನ್ಯ ಉತ್ಪಾದನೆಯು ೩೦.೮೧ ಲಕ್ಷ ಮೆಟ್ರಿಕ್ ಟನ್ ಎಂದು ಅಂದಾಜಿಸಲಾಗಿದೆ.

ತೊಗರಿ, ಕಡಲೆಕಾಳು ಉತ್ಪಾದನೆಯು ಕ್ರಮವಾಗಿ ೩೫ ಲಕ್ಷ ಮೆಟ್ರಿಕ್ ಟನ್ ಮತ್ತು ೧೧೫ ಲಕ್ಷ ಮೆಟ್ರಿಕ್ ಟನ್ ಎಂದು ಅಂದಾಜಿಸಲಾಗಿದೆ.

*****************

ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಗ್ರ್ಯಾಂಡ್ ಪ್ರಿಕ್ಸ್ -೨೦೨೫ ಇಂದು ನವದೆಹಲಿಯ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ಆರಂಭವಾಗಲಿದೆ. ಮೂರು ದಿನಗಳ ಈ ಕ್ರೀಡಾಕೂಟದಲ್ಲಿ ೧೪೫ ಭಾರತೀಯ ಆಟಗಾರರು ಮತ್ತು ೨೦ ದೇಶಗಳ ೧೦೫ ಅಂತರರಾಷ್ಟ್ರೀಯ ಸ್ಪರ್ಧಿಗಳು ಸೇರಿದಂತೆ ಒಟ್ಟು ೨೫೦ ಪ್ಯಾರಾಕ್ರೀಡಾಪಟುಗಳು ಭಾಗವಹಿಸಲಿದ್ದಾರೆ.

ಅವರು ೯೦ ಅಥ್ಲೆಟಿಕ್ಸ್ ಸ್ಪರ್ಧೆಗಳಲ್ಲಿ ಸ್ಪರ್ಧಿಸಲಿದ್ದಾರೆ, ಇದು ಭಾರತ ಆಯೋಜಿಸಿರುವ ಅತಿದೊಡ್ಡ ಪ್ಯಾರಾ-ಅಥ್ಲೆಟಿಕ್ಸ್ ಸ್ಪರ್ಧೆಗಳಲ್ಲಿ ಒಂದಾಗಿದೆ. ಪ್ಯಾರಿಸ್ ೨೦೨೪ ಪ್ಯಾರಾಲಿಂಪಿಕ್ಸ್ ಚಿನ್ನದ ಪದಕ ವಿಜೇತರಾದ ಪ್ರವೀಣ್ ಕುಮಾರ್, ನವದೀಪ್ ಸಿಂಗ್ ಮತ್ತು ಧರಮ್‌ಬೀರ್ ಭಾರತೀಯ ತಂಡವನ್ನು ಮುನ್ನಡೆಸಲಿದ್ದಾರೆ.

ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಗ್ರ್ಯಾಂಡ್ ಪ್ರಿಕ್ಸ್‌ನ ೧೨ ನೇ ಆವೃತ್ತಿಯ ಮೊದಲ ಚರಣ ಕಳೆದ ತಿಂಗಳು ದುಬೈನಲ್ಲಿ ಆರಂಭಗೊಂಡಿತು. ಬರುವ ಜುಲೈನಲ್ಲಿ ಜೆಕಿಯಾದ ಓಲೋಮೌಕ್‌ನಲ್ಲಿ ನಡೆಯುವ ಕೊನೆಯ ಚರಣದ ಮೂಲಕ ಸಮಾಪನಗೊಳ್ಳಲಿದೆ. ಐದು ಚಿನ್ನ, ಆರು ಬೆಳ್ಳಿ ಮತ್ತು ಮೂರು ಕಂಚು ಸೇರಿದಂತೆ ೧೪ ಪದಕಗಳನ್ನು ಗೆದ್ದ ಭಾರತ ದುಬೈನಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿತ್ತು.

*****************

ಮುಂಬೈನಲ್ಲಿ ಕಳೆದ ರಾತ್ರಿ ನಡೆದ ಡಬ್ಲ್ಯೂ ಪಿ ಎಲ್- ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡ ಗುಜರಾತ್ ಜೈಂಟ್ಸ್ ತಂಡದ ವಿರುದ್ಧ ೯ ರನ್‌ಗಳಿಂದ ಜಯಗಳಿಸಿದೆ.

ಮೊದಲು ಬ್ಯಾಟ್ ಮಾಡಿದ ಮುಂಬೈ ತಂಡ ನಿಗದಿತ ೨೦ ಓವರ್‌ಗಳಲ್ಲಿ ೬ ವಿಕೆಟ್ ನಷ್ಟಕ್ಕೆ ೧೭೯ ರನ್ ಗಳಿಸಿತು. ಮುಂಬೈ ಪರ ನಾಯಕಿ ಹರ್ಮನ್ ಪ್ರೀತ್ ಕೌರ್ ೫೪, ನಾಟ್ ಸ್ಕಿವರ್ ಬ್ರಂಟ್ ೩೮, ಅಮನ್‌ಜ್ಯೋತ್ ಕೌರ್ ೨೭ ರನ್ ಗಳಿಸಿದರು.

ಗುಜರಾತ್ ಪರ ಪ್ರಿಯತಾ ಮಿಶ್ರಾ, ಆಶ್ಲೆ ಗಾರ್ಡ್ನರ್ ಹಾಗೂ ಕಾಶ್ವೀ ಗೌತಮ್ ೧ ವಿಕೆಟ್ ಪಡೆದರು. ಗುರಿ ಬೆನ್ನತ್ತಿದ ಗುಜರಾತ್, ೨೦ ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡು ೧೭೦ ರನ್ ಗಳಿಸಲಷ್ಟೇ ಶಕ್ತವಾಯಿತು.

ಗುಜರಾತ್ ಪರ ಭಾರ್ತಿ ಫುಲ್‌ಮಲಿ ೬೧, ಹರ್ಲೀನ್ ಡಿಯೋಲ್ ೨೪ ರನ್ ಗಳಿಸಿದರು. ಮುಂಬೈ ಪರ ಅಮೆಲಿಯಾ ಕೆರ್, ಹೈಲೀ ಮ್ಯಾಥ್ಯೂಸ್ ತಲಾ ೩ ವಿಕೆಟ್ ಪಡೆದರು.

ಮುಂಬೈ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ನಾಯಕಿ ಹರ್ಮನ್ ಪ್ರೀತ್ ಕೌರ್ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಮುಂಬೈನಲ್ಲಿ ಇಂದು ನಡೆಯುವ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಮುಂಬೈ ಇಂಡಿಯನ್ಸ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ರಾತ್ರಿ ೭:೩೦ ಕ್ಕೆ ಆರಂಭವಾಗಲಿದೆ.

*********ಮುಕ್ತಾಯ*******